ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\8109\2015\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:21/03/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ದೂರುದಾರರಾದ ಶ್ರೀ.ಸಿದ್ದಲಿಂಗಯ್ಯ ಬಿನ್ ಲೇ.ಆಂಜಿನಪ್ಪ, ಚಿನಿವಾರನಹಳ್ಳಿ, ಬೆಲ್ಲದರ ಅಂಚೆ, ಕೋರ ಹೋಬಳಿ, ತುಮಕೂರು ತಾಲ್ಲೂಕ್ ಮತ್ತು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ತುಮಕೂರು ತಾಲ್ಲೂಕ್ ಮತ್ತು ಜಿಲ್ಲೆ ಕೋರ ಹೋಬಳಿ ಬೆಲ್ಲದರ ಅಂಚೆ ಚಿನಿವಾರನಹಳ್ಳಿಯ ನಿವಾಸಿಯಾದ ಶ್ರೀ.ಸಿದ್ದಲಿಂಗಯ್ಯ ಬಿನ್ ಲೇ.ಆಂಜಿನಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಗ್ರಾಮಾಂತರ ಆರಕ್ಷಕ ವೃತ್ತ ನಿರೀಕ್ಷಕರ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಶ್ರೀಮತಿ.ಶಶಿಕಲಾ ದಾಳಪ್ಪ, ಮಾಜಿ ಗ್ರಾಮ ಪಂಚಾಯತ್ ಸದಸ್ಯರು ಕಾನೂನು ಬಾಹಿರವಾಗಿ ತುಮಕೂರು ಬಸ್ ನಿಲ್ದಾಣದಲ್ಲಿರುವ ನವೀನ್ ವೈನ್ ಸ್ಟೋರ್‌ಗೆ ಮದ್ಯ ಮಾರಾಟ ಮಾಡುತ್ತಿದ್ದು, ಆ ಪ್ರದೇಶವು ಗ್ರಾಮದ ಮಧ್ಯ ಭಾಗದಲ್ಲಿದ್ದು, ಅದರ ಅಕ್ಕಪಕ್ಕದಲ್ಲಿ ಬಸವಣ್ಣನ ದೇವಸ್ಥಾನ ಹಾಗೂ ಶಾಲೆಗಳು ಇವೆ. ಈ ಬಗ್ಗೆ ಎದುರುದಾರರಿಗೆ ತಿಳಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸಲು ತುಮಕೂರು ಜಿಲ್ಲೆ ಆರಕ್ಷಕ ಉಪಾಧೀಕ್ಷಕ (ಇನ್ನು ಮುಂದೆ, 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ರವರಿಗೆ ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ-

ಎದುರುದಾರರು, ಪಿಎಸ್ಐ ಹಾಗೂ ಸಿಬ್ಬಂಧಿಯವರು ದಿ:10/04/15ರಂದು ಚಿನಿವಾರ ಹಳ್ಳಿ ಗ್ರಾಮಕ್ಕೆ ತೆರಳಿ, ಊರ ಮುಂಭಾಗ ಅರಳೀಕಟ್ಟೆಯ ಬಳಿ ನಿಂತಿರುವಾಗ ಕೆಎ 06 ಎ 6434 ಆಟೋ ಬರುತ್ತಿದ್ದು, ಅದನ್ನು ಪರಿಶೀಲಿಸಲಾಗಿ, ಮಧ್ಯದ ಬಾಟಲಿಗಳಿದ್ದು, ಸದರಿ ಆಟೋ ಚಾಲಕ ಶ್ರೀ.ಲಿಂಗರಾಜು ರವರನ್ನು ವಶಕ್ಕೆ ಪಡೆದು ತುಮಕೂರು ಗ್ರಾಮಾಂತರ ಠಾಣಾ ಮೊಕದ್ದಮೆ ಸಂ:80/2015 ಅಬಕಾರಿ ಕಾಯಿದೆ ಕಲಂ 32, 34ರಡಿ ಪ್ರಕರಣ ದಾಖಲಿಸಿದೆ. ಅಲ್ಲದೇ, ಶ್ರೀ.ಲಿಂಗರಾಜು ಬಿನ್ ಈರಪ್ಪ ಹಾಗೂ ಶ್ರೀಮತಿ.ಶಶಿಕಲಾ ಬಿನ್ ದಾಳಪ್ಪ ರವರನ್ನು ದಸ್ತಗಿರಿ ಮಾಡಿ, ನ್ಯಾಯಾಲಯಕ್ಕೆ ಹಾಜರುಪಡಿಸಿ, ನ್ಯಾಯಾಂಗ ಬಂಧನದಲ್ಲಿರುವುದಾಗಿ ಹೇಳಿದ್ದಾರೆ.

4. ವರದಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:–

ಸದರಿ ಮಧ್ಯದಂಗಡಿಯಲ್ಲಿ ಅಕ್ರಮ ಮಧ್ಯ ಮಾರಾಟ ಮತ್ತು ಸಾಗಣೆಯ ಬಗ್ಗೆ ಎದುರುದಾರರು ದಾಳಿ ನಡೆಸಿ, ತುಮಕೂರು ಗ್ರಾಮಾಂತರ ಠಾಣಾ ಮೊಕದ್ದಮೆ ಸಂ:80/2015 ಅಬಕಾರಿ ಕಾಯಿದೆ ಕಲಂ 32, 34ರಡಿ ಪ್ರಕರಣ ದಾಖಲಿಸಲಾಗಿದೆ. ಅಲ್ಲದೇ, ಶ್ರೀ.ಲಿಂಗರಾಜು ಬಿನ್ ಈರಪ್ಪ ಹಾಗೂ ಶ್ರೀಮತಿ.ಶಶಿಕಲಾ ಬಿನ್ ದಾಳಪ್ಪ ರವರನ್ನು ದಸ್ತಗಿರಿ ಮಾಡಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ನ್ಯಾಯಾಂಗ ಬಂಧನದಲ್ಲಿದ್ದಾರೆ. ಆದರೆ, ಸದರಿ ಮಧ್ಯದಂಗಡಿಯು ಗ್ರಾಮದ ಮಧ್ಯ ಭಾಗದಲ್ಲಿದ್ದು, ಅದರ ಅಕ್ಕಪಕ್ಕದಲ್ಲಿ ಶಾಲೆ ಹಾಗೂ ಬಸವಣ್ಣನ ದೇವಸ್ಥಾನವಿದ್ದು, ಸದರಿ ಮಧ್ಯದ ಅಂಗಡಿ ನಡೆಸಲು ನಿಯಮಾವಳಿಗೆ ವಿರುದ್ಧವಾಗಿದೆ. ಯಾವುದೇ ಶಾಲೆ ಅಥವಾ ದೇವಸ್ಥಾನ ಇರುವ ಪ್ರದೇಶಗಳಲ್ಲಿ ಮಧ್ಯದಂಗಡಿಗಳನ್ನು ತೆರೆಯಲು ಕರ್ನಾಟಕ ಅಬಕಾರಿ ನಿಯಮಾವಳಿಗಳಲ್ಲಿ ಅವಕಾಶವಿಲ್ಲ. ಸದರಿ ಮಧ್ಯದ ಅಂಗಡಿಯಲ್ಲಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದು, ಈ ಬಗ್ಗೆ ಈಗಾಗಲೇ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

6. ಆದ್ದರಿಂದ, ಸದರಿ ಮಧ್ಯದಂಗಡಿಯು ಅಬಕಾರಿ ನಿಯಮಾವಳಿಗೆ ವಿರುದ್ಧವಾಗಿ ಸ್ಥಾಪಿಸಲ್ಪಟ್ಟಿರುವುದರಿಂದ, ಸದರಿ ಮಧ್ಯದಂಗಡಿಯ ಪರವಾನಗಿಯನ್ನು ರದ್ದುಪಡಿಸಿ, ಬಂದ್ ಮಾಡಲು

ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

21/3/17.

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.